ಆ) ಜಿಲ್ಲಾಧಿಕಾರಿಗಳ ಕಛೇರಿಯ ಮೂಲಕ ಎಲ್ಲಾ ಕಾಗದ ಪತ್ರಗಳು ಬಂದಿದ್ದರೂ ಸಹ ಸರ್ಕಾರವು ನೀತಿ ಅನುಸರಿಸುತ್ತಿರುವುದರ ವಿಳಂಬ ಉದ್ದೇಶವೇನು;

ಇ) ಈ ಅಂದಾಜು ಪ್ರತಿಗಳನ್ನು ಅನುಮೋದಿಸಿ ಹಣ ಬಿಡುಗಡೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹಾವೇರಿ ಕ್ಷೇತ್ರದಲ್ಲಿನ ಏಳು ದೇವಸ್ಥಾನಗಳಿಗೆ ಅನುದಾನ ಮಂಜೂರು ಮಾಡುವಂತೆ ಶಾಸಕರಾದ ಶ್ರೀ ನೆಹರು ಚ. ಓಲೇಕಾರರವರು ಮಾನ್ಯ ಮುಜರಾಯಿ ಮತ್ತು ವಸತಿ ಸಚಿವರಿಗೆ ಮನವಿ ಸಲ್ಲಿಸಿದ್ದು, ಈ ಮನವಿ ಪತ್ರಗಳು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ದಿನಾಂಕ: 24-06-2009 ರಂದು ಸ್ವೀಕೃತವಾಗಿದೆ.

ಆ) ಜಿಲ್ಲಾಧಿಕಾರಿಗಳ ಕಛೇರಿಯ ಮೂಲಕ ಕಾಗದ ಪತ್ರಗಳು ಬಂದಿರುವುದಿಲ್ಲ.

ಇ) ಮೇಲಿನ ಉಪ ಪ್ರಶ್ನೆ 'ಅ' ನಲ್ಲಿ ತಿಳಿಸಿರುವ ಧಾರ್ಮಿಕ ಸಂಸ್ಥೆಗಳ ಅನುದಾನ ಮಂಜೂರಾತಿ ಪ್ರಸ್ತಾವನೆಗಳನ್ನು ಧಾರ್ಮಿಕ ದತ್ತಿ ಆಯುಕ್ತರಿಂದ ಬಂದ ನಂತರ ಅನುದಾನ ಮಂಜೂರು ಮಾಡಲು ಹಾಗೂ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಕುರಿತು ಸರ್ಕಾರವು ಕ್ರಮಕೈಗೊಳ್ಳುವುದು.

ಕುಡಿಯುವ ನೀರು ಯೋಜನೆ

798 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೈ ಮಹದೇಶ್ವರ ಬೆಟ್ಟಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರು ಯೋಜನೆ ಒದಗಿಸಲು ರೂ. 16 ಕೋಟಿಗಳ ಯೋಜನಾ ವೆಚ್ಚದ ಬದಲಿಗೆ ರೂ. 24.00 ಕೋಟಿಗೆ ಯೋಜನಾ ವೆಚ್ಚವಾಗಿದ್ದು, ಹೆಚ್ಚುವರಿಯಾದ ರೂ.8 ಕೋಟಿ ಅನುದಾನ ಬಿಡುಗಡೆ ಮಾಡಿ, ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಸ್ತಾವವು ಧಾರ್ಮಿಕ ಮತ್ತು ದತ್ತಿ ಇಲಾಖೆಯ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹೌದು.

ಆ) ಪರಿಷ್ಕೃತ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ಹಾಗೂ ಈ ಕಾಮಗಾರಿಗೆ ಬೇಕಾಗುವ ಬಾಕಿ ಮೊತ್ತವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

926 ಶ್ರೀ ಡೆರಿಕ್ ಎಂ.ಬಿ. ಫುಲ್‌ಇನ್‌ಫಾ (ನಾಮಾಂಕಿತ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007–08 ಮತ್ತು 2008–09 ನೇ ಸಾಲಿನಲ್ಲಿ ರೂ. 5000/– ಶುಲ್ಕ ಮರುಪಾವತಿ ಪಡೆದ ಆಂಗ್ಲೋ ಭಾರತೀಯ ಸಮುದಾಯದ ಮಕ್ಕಳ ಸಂಖ್ಯೆ:

ಆ) ಹಾಗಿದ್ದರೆ, 2007–08 ಮತ್ತು 2008–09ನೇ ಸಾಲಿನಲ್ಲಿ ಶುಲ್ಕ ಮರುಪಾವತಿ ಪಡೆದ ಮಕ್ಕಳ ಪಟ್ಟಿ ಮತ್ತು ಶಾಲೆಗಳ ಪಟ್ಟಿಯನ್ನು ಒದಗಿಸುವುದು;

ಇ) ಕಳೆದ ಮೂರು ವರ್ಷಗಳಿಂದ ಬಹುತೇಕ ಇಂಗ್ಲೀಷ್ ಮಾಧ್ಯಮದ ಶಾಲೆಗಳು ಸರ್ಕಾರದ ಗಮನಕ್ಕೆ ಅಥವಾ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಅಥವಾ ಮಾನ್ಯ ಶಾಸಕರ (ಆಂಗ್ಲೋ–ಭಾರತೀಯ) ಗಮನಕ್ಕೆ ತರದೇ ಈ ಶುಲ್ಕ ಮರುಪಾವತಿ ಯೋಜನೆಯಿಂದ ಹೊರಗುಳಿದಿದ್ದಾರೆ. ಈ ಸೌಲಭ್ಯವನ್ನು ಬಳಸಿಕೊಳ್ಳುತ್ತಿಲ್ಲ. ಇದರಿಂದ ಆಂಗ್ಲೋ–ಭಾರತೀಯ ಸಮುದಾಯದ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಯಿಂದ ವಂಚಿತರಾಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಸಂಬಂಧ ಸರ್ಕಾರವು ಯಾವ ಕ್ರಮ ತೆಗೆದುಕೊಳ್ಳಲಿದೆ;

ಉ) ಆಂಗ್ಲೋ–ಭಾರತೀಯ ಸಮುದಾಯದ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿ ಕಳೆದ 2 ವರ್ಷಗಳಲ್ಲಿ ಸರ್ಕಾರವು ಎಷ್ಟು ಹಣವನ್ನು ವಿನಿಯೋಗಿಸಿದೆ;

ಊ) ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸರ್ಕಾರ, ಮಾನ್ಯ ಶಾಸಕರು(ಆಂಗ್ಲೋ–ಭಾರತೀಯ) ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡುತ್ತದೆಯೇ?